**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

**ಮೊಕದ್ದಮೆ ಸಂಖ್ಯೆಃ ಸಿಸಿ 556/2018**

CW- 6 PW-7

| | |
|---|---|
| ಸಾಕ್ಷಿಯ ಹೆಸರು | ಡಾಕ್ಟರ ಭೀಮಸೇನ ಹಣಮಂತ ಬಾಗಲಕೋಟ |
| ತಂದೆಯ ಹೆಸರು | ಹಣಮಂತ |
| ವಯಸ್ಸು | 39 ವರ್ಷ |
| ಉದ್ಯೋಗ | ಎಲುವು ಮತ್ತು ಕೀಲು ತಜ್ಞರು, ಜಿಲ್ಲಾ ಆಸ್ಪತ್ರೆ, ಬಾಗಲಕೋಟೆ |
| ವಾಸಸ್ಥಳ | ಬಾಗಲಕೋಟೆ |

**ಸಾಕ್ಷಿಗೆ ದಿ.11-02-2026 ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅಭಿಯೋಜಕರಿಂದ.**

1. ನಾನು ದಿಃ 01-4-2016 ರಿಂದ 05-07-2022 ರ ವರೆಗೆ ಗೋಕಾಕಿನ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಲುವು ಮತ್ತು ಕೀಲು ತಜ್ಞನೆಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ. 27-03-2017 ರಂದು ಮದ್ಯಾಹ್ಣ 2-15 ಗಂಟೆ ಸಮಯದಲ್ಲಿ ನಾನು ಕರ್ತವ್ಯದಲ್ಲಿರುವಾಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ 1 ರವರು ಆಸ್ಪತ್ರೆಗೆ ಹಲ್ಲೆಯ ಹಿನ್ನಲೆಯಲ್ಲಿ ಬಂದಿದ್ದು ಅವರನ್ನು ಪರಿಕ್ಷಿಸಿದಾಗ ಈ ಕೆಳಕಂಡ ಗಾಯಗಳು ಆಗಿದ್ದವು.

1. ಎಡಗೈಯ ಮುಂಗೈ ಮೇಲೆ ತರಚಿದ ಗಾಯ 1 CM x 0.5 CM
2. ಮೊಳಕೈ ಮೇಲೆ ತರಚಿದ ಗಾಯ 1 CM x 0.5 CM

3. ಚಪ್ಪೆಯ ಮೇಲೆ ರಕ್ತ ಹೆಪ್ಪುಗಟ್ಟಿದ ಗಾಯ 10 CM x 2 CM

ಈ ಮೆಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಬಿರುಸಾದ ಮತ್ತು ಮೊಂಡಾದ ವಸ್ತುಗಳಿಂದ ಸಂಭವಿಸಿದ ಗಾಯಗಳು ಆಗಿದ್ದವು ಎಂದು ಅಭಿಪ್ರಾಯ ನೀಡಿ , ಗಾಯದ ಪ್ರಮಾಣ ಪತ್ರವನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ.

ಸಾಕ್ಷಿ ಗಾಯ ಪ್ರಮಾಣ ಪತ್ರದ ಮೇಲಿನ ತಮ್ಮ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿ 1 ರವರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ಚಾಸಾ 1 ತಾನೇ ಸ್ವತಃ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದರು. ಒಂದು ವೇಳೆ ಯಾವುದೇ ವ್ಯಕ್ತಿ ತಾನಾಗಿಯೇ ಬಿರುಸಾದ ಹಾಗೂ ಮೊಂಡಾದ ವಸ್ತುವಿನ ಮೇಲೆ ಆಯ ಬಿದ್ದಾಗ ರಕ್ತ ಹೆಪ್ಪು ಗಟ್ಟಿದ ಗಾಯಗಳು ಆಗುತ್ತವೆ ಎಂದರೆ ಸರಿ. ಚಾಸಾ 1 ರವರ ಬಟ್ಟೆಯ ಮೇಲೆ ಯಾವುದೇ ರಕ್ತ ಕಲೆಗಳು ಇರಲಿಲ್ಲ ಎಂದರೆ ಸರಿ. ಯಾವುದೇ ವ್ಯಕ್ತಿ ಓಡಿ ಹೋಗುವಾಗ ಚರಂಡಿ ಬದಿಯಲ್ಲಿ ಬಿದ್ದಾಗ ನಿಪಿ-6 ರ 1 ನೇ ಗಾಯ ಸಂಭವಿಸುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಿಪಿ-6 ರ ಗಾಯ ಗಳ ನಿರ್ಧಿಷ್ಟ ವಯಸ್ಸು ಹೇಳಲು ಆಗುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾ.ದಂ., ಗೋಕಾಕ.